ಸಿ. ಸಿ. 2207/2024 PW-1

ಬಸಮ್ಮ ಗಂಡ ದೇವಪ್ಪ

ದಿ.16-08-2025. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಶ್ರೀ ಎಮ್.ಕೆ ವಕೀಲರಿಂದ :-**

ಆರೋಪಿ ನನಗೆ 2009 ರಿಂದ ಪರಿಚಯ. ಆರೋಪಿ ಸಹ ಅಂಗನವಾಡಿ ಕಾರ್ಯಕರ್ತೆ ಎಂದರೆ ಸರಿ. ಆರೋಪಿ ಮತ್ತು ನಾನು ಒಂದೆ ಇಲಾಖೆಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ಮೀಟಿಂಗ್ ಇದ್ದಾಗ ಮತ್ತು ಕಾರ್ಯಕ್ರಮ ಇದ್ದಾಗ ನಾನು ಮತ್ತು ಆರೋಪಿ ಒಟ್ಟಿಗೆ ಹೋಗುತ್ತೇವೆ ಎಂದರೆ ಸರಿ. ಆರೋಪಿ ಮತ್ತು ನಾನು ನಮ್ಮ ಸಂಘದ ವತಿಯಿಂದ ಮುಷ್ಕರಕ್ಕೆ ದೆಹಲಿಗೆ ಹೋಗಿರುತ್ತೇವೆ. ಮಾರ್ಗದಲ್ಲಿ ನಾವು ಕಾಶಿ ವಿಶ್ವನಾಥಕ್ಕೆ ಹೋಗಿರುತ್ತೇವೆ. ಈ ಪ್ರಕರಣ ದಾಖಲಾಗುವ ಮುಂಚೆ ನಾನು ಮತ್ತು ಆರೋಪಿ ಆತ್ಮಿಯರಾಗಿದ್ದೆವು ಎಂದರೆ ಸರಿ. ನಾವು ಸಾಮಾನ್ಯವಾಗಿ ಮೀಟಿಂಗಕ್ಕೆ ಹೋಗುವದರಿಂದ ಆರೋಪಿ ಹೇಗೆ ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತಿದೆ ಎಂದೆರ ಸರಿಯಲ್ಲ.

2. ನಾನು ಆರೋಪಿಯೊಂದಿಗೆ ಇದೆ ಮೊದಲ ಬಾರಿಗೆ ಹಣಕಾಸಿನ ವ್ಯವಹಾರ ಮಾಡಿರುತ್ತೇನೆ. ಇದೇ ರೀತಿ ನಾನಾಗಲೀ ಅಥವಾ ನನ್ನ ಗಂಡನಾಗಲೀ ಬೇರೆಯವರ ಜೊತೆ ಹಣಕಾಸಿನ ವ್ಯವಹಾರ ಮಾಡಿಲ್ಲ. ಆರೋಪಿಯು ನಮ್ಮ ಮನೆಗೆ ಬಂದು ಹಣ ಬೇಕು ಎಂದು ಕೇಳಿರುತ್ತಾಳೆ. ಯಾವ ಕಾರಣಕ್ಕೆ ಹಣ ಕೇಳಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಆರೋಪಿ ನನಗೆ ರೂ.12,50,000/- ಕೇಳಿದ್ದಳು. ಆರೋಪಿಯದು ಹಟ್ಟಿ ಸ್ವಂತ ಊರು ಅಲ್ಲ ಎಂದರೆ ಸರಿ. ನಾನು ಆರೋಪಿತಳಿಗೆ ರೂ.11,50,000/- ಹಣ ಕೊಟ್ಟಿರುತ್ತೇನೆ. ದಿನಾಂಕ 02-11-2022 ರಂದು ನಾನು ಆರೋಪಿತಳಿಗೆ ಹಣ ಕೊಟ್ಟಿರುತ್ತೇನೆ. ಸದರಿ ಹಣ ನಮ್ಮ ಮನೆಯಲ್ಲಿ ಇತ್ತು. ಹಣಕ್ಕೆ ಜಾಮೀನುದಾರರಾಗಿ ಶಿವಪುತ್ರಪ್ಪ, ಗೋವಿಂದಪ್ಪ, ಆದಮ್ಮ ಮತ್ತು ಉಮಾದೇವಿ ಇದ್ದರು. ಸಾಕ್ಷಿ ಮುಂದುವರೆದು ಅವರು ಜಾಮೀನುದಾರರಲ್ಲ ಸಾಕ್ಷಿದಾರರಾಗಿದ್ದರು. ಅವರನ್ನು ಸಾಕ್ಷಿದಾರರನ್ನಾಗಿ ಪ್ರಾಮಿಸರಿ ನೋಟಿನಲ್ಲಿ ಸಹಿ ಮಾಡಿಸಿರುತ್ತೇನೆ. ಸದರಿ ಪ್ರಾಮಿಸರಿ ನೋಟನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಪ್ರಾಮಿಸರಿ ನೋಟ್ ಬರೆಸಿಕೊಂಡ ಬಗ್ಗೆ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ವಕೀಲರಿಗೆ ತೋರಿಸಿರುತ್ತೇನೆ. ಕೈಗಡ ಪತ್ರವನ್ನು ದಿನಾಂಕ 02-11-2022 ರಂದು ನೋಟರಿ ಹತ್ತಿರ ಬರೆಸಿರುತ್ತೇವೆ. 4 ಜನ ಸಾಕ್ಷಿದಾರರು ನಮಗೂ ಪರಿಚಯ ಮತ್ತು ಆರೋಪಿಗೂ ಪರಿಚಯ ಇರುತ್ತಾರೆ.

3. ದಿನಾಂಕ 02-11-2022 ರಂದು ನಾವು ಕರ್ತವ್ಯ ಮುಗಿಸಿಕೊಂಡು ಬಂದು ಸಂಜೆ 6-00 ಗಂಟೆಗೆ ನಾವು ಹಣ ಕೊಟ್ಟಿರುತ್ತೇನೆ. ಆ ದಿನವೇ ನಾನು ಕೈಗಡ ಪತ್ರ ಬರೆಸಿಕೊಂಡು ಹಟ್ಟಿಗೆ

ಹೋಗಿ ಹಣ ಕೊಟ್ಟಿರುತ್ತೇನೆ. ಕೈಗಡ ಪತ್ರದಲ್ಲಿ ಬಡ್ಡಿ ಎಷ್ಟು ಎಂದು ಬರೆದಿರುವುದಿಲ್ಲ. ಕೈಗಡ ಪತ್ರದಲ್ಲಿ ಒಟ್ಟು 4 ಜನ ಸಾಕ್ಷಿಗಳ ಸಹಿ ಮತ್ತು ನಮ್ಮ ಇಬ್ಬರ ಸಹಿ ಇರುತ್ತವೆ. ಕೈಗಡ ಪತ್ರದಲ್ಲಿ 3 ತಿಂಗಳ ಅವಧಿಯೊಳಗಾಗಿ ಮರುಪಾವತಿ ಮಾಡಬೇಕೆಂದು ಬರೆದಿರುತ್ತೇನೆ. 3 ತಿಂಗಳೊಳಗಾಗಿ ಹಣ ಮರು ಪಾವತಿ ಮಾಡಿದಿದ್ದಕ್ಕೆ ನಾನು ನೋಟಿಸು ಕೊಟ್ಟಿರುವುದಿಲ್ಲ. ಆದರೆ ನಾವು ಹಣ ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಹನ್ನೊಂದುವರೆ ಲಕ್ಷ ಹಣವನ್ನು ಐದುನೂರು ಮುಖಬೆಲೆ 23 ಕಟ್ಟುಗಳಲ್ಲಿ ಕೊಟ್ಟಿರುತ್ತೇನೆ. ಕೈಗಡ ಪತ್ರದ ಅವಧಿ ಮುಗಿದ ಮೇಲೆ ದಿನಾಂಕ 15-07-2024 ಕ್ಕೆ ಆರೋಪಿ ನನಗೆ ಚೆಕ್ಕು ಕೊಟ್ಟಿರುತ್ತಾಳೆ. ಆರೋಪಿತಳು ಬೆಳಿಗ್ಗೆ 9-00 ಗಂಟೆಗೆ ಬಂದು ಚೆಕ್ಕು ಕೊಟ್ಟಿರುತ್ತಾಳೆ. ಆರೋಪಿ ನನಗೆ ಎಸ್.ಬಿ.ಐ ಬ್ಯಾಂಕಿನ ಚೆಕ್ಕು ಕೊಟ್ಟಿರುತ್ತಾಳೆ. ಎಸ್.ಬಿ.ಐ., ಐ.ಬಿ ಬ್ರ್ಯಾಂಚ್ ಚೆಕ್ಕು ಹಾಜರು ಪಡಿಸಿರುತ್ತೇನೆ. ಚೆಕ್ಕನ್ನು ಆ ದಿನ ಮದ್ಯಾಹ್ನ 4-00 ಗಂಟೆಗೆ ಬಂದು ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ಅದೇ ದಿನ ಬ್ಯಾಂಕಿನವರು ಹಿಂಬರಹ ಕೊಟ್ಟಿರುತ್ತಾರೆ. ಸದರಿ ಹಿಂಬರಹದಲ್ಲಿ ಸಹಿ ತಪ್ಪು ಇದೆ ಮತ್ತು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಕೊಟ್ಟಿರುತ್ತಾರೆ. ಸಹಿ ತಪ್ಪಾಗಿದ್ದ ಬಗ್ಗೆ ನಾನು ಪಾರ್ವತಿ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುವುದಿಲ್ಲ. ಮುಂದುವರೆದು ಆರೋಪಿಗೆ ಸಹಿ ತಪ್ಪಾಗಿದೆ ಮತ್ತು ಸಾಕಷ್ಟು ಹಣ ಇಲ್ಲ ಎಂದು ಕೇಳಿರುತ್ತೇನೆ. ಅದೇ ದಿನ ಆರೋಪಿಗೆ ಪೋನ್ ಮಾಡಿ ಕೇಳಿರುತ್ತೇನೆ. ಈ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

4. ನಿ.ಪಿ-1 ಚೆಕ್ಕಿನಲ್ಲಿ ಸಹಿ ಮಾಡಿದ್ದನ್ನು ನಾಉ ನೋಡಿಲ್ಲ. ಆರೋಪಿ ಏನು ವಿದ್ಯಾಬ್ಯಾಸ ಮಾಡಿದ್ದಾಳೆ ಎಂದು ನನಗೆ ಮಾಹಿತಿ ಇಲ್ಲ. ನಿ.ಪಿ-1 ರಲ್ಲಿ ಬರೆದ ಹಾಗೆ ಇಂಗ್ಲಿಷ್ ಬರೆಯಲು ಆರೋಪಿಗೆ ಬರುವದಿಲ್ಲ ಎಂದರೆ ಸಾಕ್ಷಿಯು ಚೆಕ್ಕನ್ನು ತುಂಬಿ ತಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ರೂ.11,50,000/- ಕೊಟ್ಟಿದ್ದು ಅವರು ನನಗೆ ಯಾವುದೇ ಹಣ ಮರುಪಾವತಿ ಮಾಡಿರುವುದಿಲ್ಲ. ಆದರೆ ಆರೋಪಿ ನನಗೆ ರೂ.9,00,000/- ಯ ಚೆಕ್ಕು ಕೊಟ್ಟಿರುತ್ತಾಳೆ. ನಿ.ಪಿ-1 ರಲ್ಲಿರುವ ಅಕ್ಷರಗಳು ಎಲ್ಲಿ ಬರೆದಿರುತ್ತಾರೆ ನನಗೆಗೊತ್ತಿಲ್ಲ. ಶಿವಪುತ್ರಪ್ಪ ಮತ್ತು ಆರೋಪಿ ಬಂದು ನನಗೆ ಕೊಟ್ಟಿರುತ್ತಾರೆ. ಇನ್ನೂ ಎರಡುವರೆ ಲಕ್ಷಕ್ಕೆ ಆರೋಪಿ ವಿರುದ್ದ ಕ್ರಮ ಕೈಗೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ರೂ.9,00,000/- ಹಣ ಇದೆ ಚೆಕ್ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ. ನಿ.ಪಿ-1 ಚೆಕ್ ನಂಬರ್ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-

ಪ್ರಧಾನ ಸಿವಿಲ ನ್ಯಾಯಾಧೀಶರು &
ಜೆಎಂಎಫ್‌ಸಿ ಲಿಂಗಸುಗೂರು.